**2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**C.Mis. 116/2016**

ಪಿ.ಡಬ್ಲ್ಯೂ. **1**

ದಿನಾಂಕಃ **16.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರವಾಗಿ ಃ ಎಸ್.ಆರ್. ವಕೀಲರಿಂದ**

ನಮ್ಮ ಜಮೀನಿನಲ್ಲಿ ಲೈನ್ ಎಳೆಯುತ್ತಿದ್ದ ಬಗ್ಗೆ ಎದುರುದಾರರಿಗೆ ನೋಟೀಸ್ ಕೊಟ್ಟು ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ಶಾರದಮ್ಮ ನನ್ನ ಅತ್ತಿಗೆ. ಶಾರದಮ್ಮನಿಗೆ ಎದುರುದಾರರು ನಿ.ಪಿ.3 ಮತ್ತು 4 ರ ಹಾಗೇ ನೋಟೀಸ್ ಕೊಟ್ಟಿದ್ದರು ಎಂದರೆ ಸಾಕ್ಷಿ ಲೈನ್ ಎಳೆಯುವಾಗ ಕೊಟ್ಟಿಲ್ಲ, ಆನಂತರ ಕೊಟ್ಟಿದ್ದಾರೆ ಅನ್ನುತ್ತಾರೆ. ಸದರಿ ನೋಟೀಸ್ ಗಳನ್ನು 2015 ರಲ್ಲಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಚೆಕ್ ಮುಖಾಂತರ ನಮಗೆ ಪರಿಹಾರದ ಹಣ ಕೊಟ್ಟಿದ್ದಾರೆ. ನಾನು ಮತ್ತು ನಮ್ಮ ಅಕ್ಕ ಪಕ್ಕದ ಜಮೀನುನವರು ಪರಿಹಾರದ ಹಣ ಸಾಕಾಗುತ್ತಿಲ್ಲ ಎಂದು ಡಿಸಿ ರವರಿಗೆ ಮನವಿ ಕೊಟ್ಟಿದ್ದರು ಎಂದರೆ ಸಾಕ್ಷಿ ನಾನು ಹೋಗಲಿಲ್ಲ ಅನ್ನುತ್ತಾರೆ. ಜಿಲ್ಲಾಧಿಕಾರಿಗಳು ಆನಂತರ ಆದೇಶ ಮಾಡಿದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆದೇಶದ ನಂತರ ಎದುರುದಾರರು ಚೆಕ್ ಮುಖಾಂತರ ನಮಗೆ ಪರಿಹಾರವನ್ನು ಕೊಟ್ಟರು ಎಂದರೆ ಸರಿಯಲ್ಲ. ಚೆಕ್ ಮುಖಾಂತರ ನಮಗೆ ಎದುರುದಾರರು ಪರಿಹಾರ ಕೊಟ್ಟಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ನನ್ನ ಜಮೀನಿನಲ್ಲಿ 50 ತೆಂಗಿನ ಮರ ಹೋಗಿರುತ್ತದೆ. 15 ವರ್ಷದ ತೆಂಗಿನ ಮರ ಇತ್ತು, ಅದಕ್ಕೆ ವರ್ಷಕ್ಕೆ 50 ಸಾವಿರ ಆದಾಯ ಬರುತ್ತಿತ್ತು ಎನ್ನುವುದನ್ನು ತೋರಿಸಲು ದಾಖಲೆ ಕೊಟ್ಟಿರುತ್ತೇನೆ. ಯಾವುದೇ ದಾಖಲೆಗಳು ಕೊಡದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ 15 ಮಾವಿನ ಮರ ಹೋಗಿರುತ್ತದೆ. 20 ವರ್ಷದ ತೆಂಗಿನ ಮರ ಇತ್ತು, ಅದಕ್ಕೆ ವರ್ಷಕ್ಕೆ 25 ಸಾವಿರ ಆದಾಯ ಬರುತ್ತಿತ್ತು ಎನ್ನುವುದನ್ನು ತೋರಿಸಲು ದಾಖಲೆ ಕೊಟ್ಟಿರುತ್ತೇನೆ. ಯಾವುದೇ ದಾಖಲೆಗಳು ಕೊಡದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ತೊಗಳೀ ಮರ (ಫಾರೆಸ್ಟ್) ಹೋಗಿರುತ್ತದೆ. 20 ವರ್ಷದ ತೊಗಳೀ ಮರ ಇತ್ತು. ಹೆಚ್ಚಿನ ಪರಿಹಾರಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**2** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು